◆ **ನೀವು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದೀರಿ. ಕಾವ್ಯ, ಕಥನ, ಕಾದಂಬರಿ, ವರದಿಗಾರಿಕೆ, ಜೀವನಚರಿತ್ರೆ, ಮಕ್ಕಳ ಪುಸ್ತಕ, ಅನುವಾದ... ಈ ವಿಭಿನ್ನ ಪ್ರಕಾರಗಳು ಹೇಗೆ ಒಂದಕ್ಕೊಂದು ಪೂರಕವಾಗಿ ಸಹಾಯ ಮಾಡುತ್ತವೆ?**

ಸಾಹಿತ್ಯದಲ್ಲಿ ಹೀಗೆ ವರ್ಗೀಕರಣ ಇದೆ ಎನ್ನುವುದೇ ನನಗೆ ಸೋಜಿಗದ ಸಂಗತಿ. ಇದೆಲ್ಲಾ ಪ್ರಕಾಶಕರು ಸೃಷ್ಟಿಸಿದ್ದು. ನನಗಂತೂ ಈಗಲೂ ಪ್ರತಿಯೊಬ್ಬ ಓದುಗನೂ ಮಕ್ಕಳ ಪುಸ್ತಕ ಓದಲು ಇಷ್ಟಪಡುತ್ತಾನೆ ಅನ್ನಿಸುತ್ತದೆ; ರಹಸ್ಯವಾಗಿ. ಸಾಕಷ್ಟು ಹಿರಿಯರು ಪುಸ್ತಕದ ಅಂಗಡಿಗಳಲ್ಲಿ ಮಕ್ಕಳ ಪುಸ್ತಕ ಹುಡುಕುವುದು ನನಗೆ ಕಂಡು ಬರುತ್ತದೆ (ನಗು).

◆ **ನನ್ನ ಗೆಳೆಯನೊಬ್ಬ ಅಂಗಡಿಯಲ್ಲಿ 'ಚಂದಮಾಮ' ಮತ್ತು 'ಡೆಬೋನೇರ್' ಜೊತೆಯಾಗಿ ಖರೀದಿಸುತ್ತಿದ್ದ.**

ಅವೆರಡೂ ಒಳ್ಳೆಯ ಜೋಡಿ. (ನಗು) ಸಾಕಷ್ಟು ಶಬ್ದಗಳು ನಿರಂತರವಾಗಿ ನನ್ನ ಬಳಿ ಹರಿದು ಬರುತ್ತಿರುತ್ತವೆ. ಅವುಗಳ ಜೊತೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೊಂದಿಕೊಂಡು ಹೋಗಲು ಪ್ರಯತ್ನಿಸುತ್ತೇನೆ. ಕೆಲವೊಮ್ಮೆ ಅವು ತುಂಬಾ ವೇಗವಾಗಿಯೂ, ಕೆಲವೊಮ್ಮೆ ಅನುಮಾನ ಹುಟ್ಟಿಸುತ್ತಲೂ, ಮತ್ತೊಮ್ಮೆ ಒಗಟಾಗಿಯೂ, ಮಗದೊಮ್ಮೆ ಕೆಟ್ಟ - ಅಂದರೆ ಶಬ್ದಗಳು ಒಳ್ಳೆಯವೇ, ಆದರೆ ಕೆಟ್ಟ ಜಾಗದಿಂದ ಎದ್ದು ಬರುತ್ತವೆ, ಒಮ್ಮೊಮ್ಮೆ ಸಿಟ್ಟಿನಿಂದ - ಅವೆಲ್ಲವನ್ನೂ ನಿರ್ವಹಿಸಿ, ಏನು ಮಾಡಬಹುದು ಎಂದು ಯೋಚಿಸುತ್ತೇನೆ. ಪ್ರತಿಯೊಬ್ಬ ಲೇಖಕನಿಗೂ ಎರಡು ಜವಾಬ್ದಾರಿಗಳಿರುತ್ತವೆ. ತೋಚಿದ್ದು ಬರೆಯುವುದು ಖುಷಿಯ ಕೆಲಸವಾದರೆ, ಅನಂತರ ಅದನ್ನು ತಿದ್ದುವುದು ಕಷ್ಟದ ಕೆಲಸ. ತಿದ್ದುವ ಹೊತ್ತಿನಲ್ಲಿಯೇ ಶಿಲಾಹೃದಯಿ 'ಜೆರ್ರಿ ಪಿಂಟೋ' ಹೊರಬರುತ್ತಾನೆ. ಅವನಿಗೆ ಭಾಷೆಯ ಶಕ್ತಿಯ ಅರಿವಿರುತ್ತದೆ. ನನಗೆ ಭಾಷೆಯೆನ್ನುವುದು ಆಳವಾಗಿಯೂ ಮತ್ತು ಮಾಂತ್ರಿಕವಾಗಿಯೂ ಶಕ್ತಿಯುತವಾಗಿಯೂ ಕಾಣಿಸುತ್ತದೆ. ಭಾಷೆಯೇ ಮನುಷ್ಯನ ಅತ್ಯಂತ ದೊಡ್ಡ ಅನ್ವೇಷಣೆ. ಆದ್ದರಿಂದ ಲೇಖಕರೆಲ್ಲರೂ ಅತ್ಯಂತ ಶ್ರಮ ವಹಿಸಿ ತಿದ್ದುವ ಕೆಲಸವನ್ನು ಮಾಡಬೇಕಾಗುತ್ತದೆ. ಇದೊಂದು ರೀತಿ ಹುಲಿಸವಾರಿ ಮಾಡಿದಂತೆ. ಕೆಳಗಿಳಿದರೆ ಹುಲಿ ತಿಂದು ಹಾಕುತ್ತದೆ. ಆಮೇಲೆ ಹಿಂತಿರುಗಿ ನೋಡಿದಾಗ 'ಅರೆ, ನಾನೊಂದು ಪದ್ಯ ಬರೆದೆ' ಅಂತ ಗೊತ್ತಾಗುತ್ತೆ. 'ಅರೆರೆ, ಅದು ಸಣ್ಣಕತೆ, ಅದು ಕಾದಂಬರಿ...' ಅಂತ ಹೊಳೆಯುತ್ತೆ. ಅದೆಲ್ಲಾ ಮಾಡೋದು ಒಬ್ಬನೇ, ಜೆರ್ರಿ ಪಿಂಟೋನೇ! ಅದು ಯಾಕೋ ಗೊತ್ತಿಲ್ಲ, ಮಕ್ಕಳಿಗಾಗಿಯೇ ಬರೆಯುತ್ತೇನೆ ಎಂದು ನಿಶ್ಚಯಿಸಿ ಕುಳಿತಾಗ, ಅಂತಹ ಬರವಣಿಗೆಗಳು ಸೋತಿವೆ. ನಾನೊಂದು ಕಾಲುವೆ ಅನ್ನಿಸುತ್ತೆ. ನೀರು ಎಲ್ಲಿಂದಲೋ ಹರಿದು ಬಂದು ಮತ್ತೆಲ್ಲಿಗೋ ಹೋಗುತ್ತದೆ. ಸುಮ್ಮನೆ ನೀರನ್ನು ನೋಡುತ್ತಾ 'ಅರೆರೆ, ಇದು ಹೀಗೆ, ಅದು ಹಾಗೆ...' ಅಂತ ಅರ್ಥ ಮಾಡಿಕೊಳ್ಳೋದು ಸಂತಸದ ಕೆಲಸ ಅನ್ನಿಸುತ್ತೆ.

◆ **ಅಂದರೆ ಸಾಹಿತ್ಯದ ಪ್ರಕಾರ ನಿಮಗೆ ಮುಖ್ಯವಲ್ಲ. ಹರಿದು ಬರುವ ಭಾವಗಳು ಮುಖ್ಯ. ಆದರೆ ಪ್ರಕಾಶಕರೊಬ್ಬರು ಕಾದಂಬರಿ ಬರೆದು ಕೊಡಿ ಎಂದು ನಿಮಗೆ ಹೇಳಿದರೆ ಏನು ಮಾಡುವಿರಿ?**

ನನ್ನ ದೊಡ್ಡ ಅದೃಷ್ಟವೆಂದರೆ ನನ್ನ ಸಾಹಿತ್ಯ ಪಯಣದ ಆರಂಭದಲ್ಲಿಯೇ ರವಿ ಸಿಂಗ್‌ನ ಪರಿಚಯವಾಯ್ತು. (ರವಿ ಸಿಂಗ್ ಅವರು ಸದ್ಯ 'ಸ್ಪೀಕಿಂಗ್ ಟೈಗರ್' ಪ್ರಕಾಶನದ ಸಹ ಸಂಸ್ಥಾಪಕರು. ಈ ಹಿಂದೆ ಪೆಂಗ್ವಿನ್, ಅಲೆಫ್ ಮುಂತಾದ ಪ್ರಖ್ಯಾತ

> ಭಾಷೆಯೇ ಮನುಷ್ಯನ ಅತ್ಯಂತ ದೊಡ್ಡ ಅನ್ವೇಷಣೆ. ಆದ್ದರಿಂದ ಲೇಖಕರೆಲ್ಲರೂ ಅತ್ಯಂತ ಶ್ರಮ ವಹಿಸಿ ತಿದ್ದುವ ಕೆಲಸವನ್ನು ಮಾಡಬೇಕಾಗುತ್ತದೆ. ಇದೊಂದು ರೀತಿ ಹುಲಿಸವಾರಿ ಮಾಡಿದಂತೆ. ಕೆಳಗಿಳಿದರೆ ಹುಲಿ ತಿಂದು ಹಾಕುತ್ತದೆ.